**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾ॥ಗೋಕಾಕ**

ಸಿ.ಸಿ. ನಂಬರಃ **1467/2010 ಸಿಡಬ್ಲೂಃ 6 ಪಿಡಬ್ಲೂಃ** 4

ಸಾಕ್ಷಿದಾರರ ಹೆಸರುಃ ಶಿವಾನಂದ ಬಸಪ್ಪ ಲೋಕನ್ನವರ
ವಯಸ್ಸುಃ 49 ವರ್ಷ
ಉದ್ಯೋಗಃ ಶೇತ್ಕಿ
ಸಾಕೀನಃ ಕೌಜಲಗಿ

ದಿಃ **04-02-2020** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ ;

ಚಾಸಾ 5 ರವರ ಪರಿಚಯವಿರುತ್ತದೆ. ಆರೋಪಿತರ ಪರಿಚಯವಿಲ್ಲ. ಈಗ ನೋಡುತ್ತಿರುವ ನೋಂದಣಾಧಿಕಾರಿ ಗೋಕಾಕ ಕಚೇರಿಯಲ್ಲಿ ನೋಂದಣಿಯಾದ ಖರೀದಿ ಪತ್ರದ ಮೇಲೆ ಇರುವ ಸಾಕ್ಷಿದಾರ ಚಾಸಾ 5 ಆತನ ಸಹಿ ತೋರಿಸಲಾಗಿ ಸದರಿ ಸಹಿಯನ್ನು ನಾನು ಮಾಡಿರುವುದಿಲ್ಲ ಮತ್ತು ನನಗೆ ಗೊತ್ತಿರುವುದಿಲ್ಲ ಹಾಗೂ ಸಹಿ ಕೆಳಗಡೆ ಇರುವ ಅಕ್ಷರಗಳು ನಾನು ಬರೆದಿರುವುದಿಲ್ಲ. ಪೊಲೀಸರು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದಿರುವುದಿಲ್ಲ. ಚಾಸಾ 1 ಮತ್ತು 4 ರವರ ಜಮೀನುಗಳನ್ನು ಆರೋಪಿತರು ಖರೀದಿ ಮಾಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆರೋಪಿತರು ನನ್ನ ಸಮಕ್ಷಮ ಖರೀದಿ ಪತ್ರಕ್ಕೆ ಸಹಿ ಮಾಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ.

*(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಆಲಿಸಿ ಅನುಮತಿ ನೀಡಲಾಯಿತು)*

ಪಾಟೀ ಸವಾಲುಃ ಸ.ಸ.ಅ ರವರಿಂದ ;

ದಿಃ 04-06-2008 ರಂದು ನಾನು ಚಾಸಾ 6 ಕೂಡಿಕೊಂಡು ಗೋಕಾಕ ನೋಂದಣಿ ಕಚೇರಿಗೆ ಹೋದಾಗ ಆರೋಪಿ ನಂ. 7 ಇತನು ಚಾಸಾ 1 ಮತ್ತು 4 ರವರ ಜಮೀನನ್ನು ಖರೀದಿ ಪಡೆಯುವ ಸಲುವಾಗಿ ನನ್ನನ್ನು ಸಬ್ ರೆಜಿಸ್ಟರ ಕಚೇರಿಗೆ ಕರೆದುಕೊಂಡು ಹೋಗಿ ಆರೋಪಿ ನಂ. 1 ರಿಂದ 10 ಕೂಡಿಕೊಂಡು ಖರೀದಿ ಪತ್ರವನ್ನು ತಯಾರಿಸಿ ಅದರ ಮೇಲೆ ಆರೋಪಿತರು ನನ್ನ ಸಮಕ್ಷಮ ಸಹಿ ಮಾಡಿದ್ದಾರೆ ಎಂದು ನಿಪಿ-29 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ ಹಾಗೂ ಚಾಸಾ 1 ಮತ್ತು 4 ರವರಿಗೆ ಆರೋಪಿತರು ಮೋಸ ಮಾಡಿದ ಬಗ್ಗೆ ಗೊತ್ತಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

**(ವೀರೇಶ ಕುಮಾರ ಸಿ. ಕೆ.)**
**ಪ್ರ.ದಿ.&ನ್ಯಾದಂ.,ಗೋಕಾಕ.**